# ಮುತ್ತಿನ ತೆನೆ

( ಸಂಶೋಧನಾ ಲೇಖನಗಳ ಗುಚ್ಛ )



-ಡಾ. ಪ್ರಕಾಶ ಎನ್. ನರಗುಂದ

**Title-** Education Through service, Service Through Education

- Dr. Thippeswamy D.S.

# ಸೇವೆಯ ಮೂಲಕ ಶಿಕ್ಷಣ, ಶಿಕ್ಷಣದ ಮೂಲಕ ಸೇವೆ

**ಡಾ. ತಿಪ್ಪೇಸ್ವಾಮಿ ಡಿ.ಎಸ್.**

ಎನ್.ಎಸ್.ಎಸ್. ಅಧಿಕಾರಿಗಳು, ಹುನಗುಂದ

ಒಂದು ರಾಷ್ಟ್ರ ಉತ್ಸಾಹ, ಶಕ್ತಿ ಒರವಸೆಗಳ ಪ್ರತೀಕವೇ ಯುವಜನತೆ. ಅದರ ಉತ್ತಮ ಬೆಳವಣಿಗೆಯೇ ರಾಷ್ಟ್ರದ ನಿಜವಾದ ಬೆಳವಣಿಗೆ, ಯುವಜನರ ವ್ಯಕ್ತಿತ್ವದ ವಿಕಾಸನವೇ ರಾಷ್ಟ್ರೀಯ ಸೇವಾ ಯೋಜನೆಯ ಗುರಿ.

ಸೇವೆ ಎನ್ನುವ ಪದ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಅತ್ಯಂತ ಮಹತ್ವವನ್ನು ಪಡೆದಿದೆ. ಸೇವೆ ಎನ್ನುವ ಪದವನ್ನು ಪ್ರಸ್ತುತ ಎಲ್ಲ ಕ್ಷೇತ್ರದಲ್ಲಿಯು, ಎಲ್ಲರೂ ಬಳಸುತ್ತಿರುವುದರಿಂದ ಅದರ ನಿಜವಾದ ಅರ್ಥದ ಬಗ್ಗೆ ಅನುಮಾನ ಹುಟ್ಟುವಂತಾಗಿದೆ. ಸೇವೆ ಎನ್ನುವುದಕ್ಕೆ "ನಿಸ್ವಾರ್ಥ" ಎಂಬ ಗುಣವಾಚಕವನ್ನು ಸೇರುವುದರ ಮೂಲಕ ಸೇವೆಯ ಅರ್ಥವನ್ನು ಕಂಡುಕೊಳ್ಳುವ ಪ್ರಯತ್ನ ನಡೆಯುತ್ತದೆ. ಸೇವೆ ಎನ್ನುವುದು ದೊಡ್ಡ ತ್ಯಾಗವೇ ಅಲ್ಲಾ. ನಮ್ಮಲ್ಲಿ ಸೂಕ್ತವಾಗಿರುವ ಸಾಮರ್ಥ್ಯಗಳನ್ನು ನಮ್ಮ ಮತ್ತು ಸಮಾಜದ ಒಳಿತಿಗಾಗಿ ವಿನಿಯೋಗಿಸುವ ಕ್ರಿಯೆಯೇ ಸೇವೆ. ಅಂದರೆ ಶ್ರಮ, ಜ್ಞಾನ, ಕೌಶಲ್ಯ, ಆರ್ಥಿಕ ಸೌಲಭ್ಯ ಇತ್ಯಾದಿ ಸಂಪನ್ಮೂಲಗಳನ್ನು ತಮ್ಮೆಲ್ಲರ ಮತ್ತು ಸಮಾಜದ ಒಳಿತಿಗಾಗಿ ಪ್ರತಿಫಲಾಪೇಕ್ಷೆ ಇಲ್ಲದೆ ಅರ್ಪಣಾ ಮನೋಭಾವದಿಂದ ನೀಡುವ ಸಹಾಯವೇ ಸೇವೆ. ಕರ್ತ್ಯವ್ಯ, ನಿರ್ವಹಣೆ ನಮ್ಮ ಧ್ಯೇಯ "NOT ME BUT YOU" ನಾನು ನನಗಾಗಿ ಮಾತ್ರವಲ್ಲ ನಮ್ಮೆಲ್ಲರಿಗಾಗಿಯೂ ಎಂಬುವುದಾಗಿದೆ.

ಹಿಂದೇ ಈ ಯೋಜನೆಯಲ್ಲಿ ಶ್ರಮದಾನಕ್ಕೆ ಹೆಚ್ಚು ಕೊಡಲಾಗುತ್ತಿತ್ತು. ಸಮುದಾಯದ ಆಸ್ತಿ, ನಿರ್ಮಾಣದಲ್ಲಿ ಯುವಜನರನ್ನು ತೊಡಗಿಸುವ ಉದ್ದೇಶವಿದ್ದರು ಕೂಡಾ ಇದರ ಪ್ರತಿಪಾದಕರು ವ್ಯಕ್ತಿ ವಿಕಾಸನಕ್ಕೆ ಪೂರಕವಾದ ಚಟುವಟಿಕೆಗಳನ್ನು ಹಮ್ಮಿಕೊಂಡು ಸಮಾಜದಲ್ಲಿ ಸೌಲಭ್ಯಗಳಿಂದ ವಂಚಿತರಾದ ಸಮುದಾಯದ ಸೇವೆಗಳನ್ನು ಒಳಗೊಂಡಿರಬೇಕೆಂಬ ಆಶಯ ಹೊಂದಿರುವುದು ಸುಸ್ಪಷ್ಟ.

ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ೨ ಚಟುವಟಿಕೆಗಳಾದ ದೈನಂದಿನ ಚಟುವಟಿಕೆ ಮತ್ತು ವಿಶೇಷ ಶಿಬಿರ ಇವುಗಳಲ್ಲಿ

ವಾರ್ಷಿಕ ಶಿಬಿರಕ್ಕೆ ಹೆಚ್ಚು ಮಹತ್ವ ನೀಡಿ ದೈನಂದಿನ ಚಟುವಟಿಕೆಗಳಲ್ಲಿ ಕಡಿಮೆ ಪ್ರಾಮುಖ್ಯ ನೀಡಲಾಗುತ್ತದೆ. ಈ ಕಾರಣದಿಂದಲೇ ನಮಗೆಲ್ಲಾ ಇಂತಹ ಸೇವಾ ಚಟುವಟಿಕೆಗಳಲ್ಲಿ ಆದರ್ಶಪ್ರಾಯರಾದ ಡಾ. ಎಚ್. ನರಸಿಂಹಯ್ಯನವರು ರಾಷ್ಟ್ರೀಯ ಸೇವಾ ಯೋಜನೆಯು ಶಿಬಿರದ ಉದ್ಘಾಟನಾ ಸಮಾರಂಭದಿಂದ ಮೇಲೆದ್ದ ಅದರ ಮುಕ್ತಾಯ ಸಮಾರಂಭದಲ್ಲಿ ಮಲಗಿದರೆ ಮತ್ತೆ ಎಚ್ಚರಗೊಳಿಸುವುದು ಮುಂದಿನ ಶಿಬಿರದಲ್ಲಿಯೇ ಎಂಬ ಮಾತು ಯೋಜನೆ ಸಾಗಬೇಕಾದ ಮಾರ್ಗದ ಬಗ್ಗೆ ನಮ್ಮೆಲ್ಲರನ್ನು ಎಚ್ಚರಿಸಿದಂತಿದೆ ಇದಾಗಬಾರದು. ಸೇವಾ ಚಟುವಟಿಕೆ ನಮ್ಮ ಜೀವನದ ಅವಿಭಾಜ್ಯ ಭಾಗವಾಗಬೇಕು, ನಮ್ಮ ಸ್ವಭಾವವಾಗಬೇಕು, ಆಗ ಸೇವೆ ಒಂದು ಅರ್ಥ ಬರುತ್ತದೆ. ಶಿಬಿರದ ಸಂದರ್ಭದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಬಗ್ಗೆ ಸಾಮಾನ್ಯ ಮಾಹಿತಿಯನ್ನು ನೀಡುವ ಹಾಗೂ ಅವರವರ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಸಾಧನೆಗಳು ಇರುವ ಮಾಹಿತಿ ಪುಸ್ತಕವನ್ನು ಶಿಬಿರಾರ್ಥಿಗಳಿಗೆ ನೀಡಿದರೆ ತುಂಬ ಉಪಯುಕ್ತ. ಆ ಪುಸ್ತಕದಲ್ಲಿದ್ದಂತಹ ಮಾಹಿತಿಯನ್ನು ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ.

ಕೇವಲ ಶಿಕ್ಷಕಮಿತ್ರರು ಈಗಿನ ಸೆಮಿಸ್ಟರ್ ಪದ್ಧತಿಯ ಕಾರಣ ನೀಡಿ ದೈನಂದಿನ ಚಟುವಟಿಕೆಗಳನ್ನು ನಡೆಸುವುದು ಕಷ್ಟಸಾಧ್ಯ ಎಂಬ ಮನೋಭಾವ ತಳೆದಿದ್ದಾರೆ. ಇದು ಸ್ವಲ್ಪ ಮಟ್ಟಿಗೆ ನಿಜವಾದ ಎನ್.ಎಸ್.ಎಸ್. ಅಧಿಕಾರಿ ಬದ್ಧತೆಯಿಂದ ಕಾರ್ಯ ನಿರ್ವಹಿಸಿದರೆ ಪಠ್ಯ ಕ್ರಮ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳೆರಡನ್ನು ಜೊತೆಜೊತೆಯಾಗಿ ಯಶಸ್ವಿಯಾಗಿ ನಡೆಸಲು ಕಂಡಿತ ಸಾದ್ಯ. ಈ ಕಾರಣದಿಂದಲೇ ರಾಷ್ಟ್ರೀಯ ಸೇವಾ ಯೋಜನೆ ಯಶಸ್ಸು ಬಹುಬಾಲು ಕಾರ್ಯಕ್ರಮ ಅಧಿಕಾರಿಯ ಸಾಮರ್ಥ್ಯ ಮತ್ತು ಆಸಕ್ತಿಯನ್ನು ಅವಲಂಬಿಸಿದೆ. ದೈನಂದಿನ ಚಟುವಟಿಕೆಗಳು ನಿರಂತರವಾಗಿ ಕನಿಷ್ಠ ವಾರಕ್ಕೊಮ್ಮೆ ಹಾಗೂ ರಜಾ ದಿನಗಳಲ್ಲಿ ಕ್ರಮ ಬದ್ಧವಾಗಿ ನಡೆದರೆ ಅದು ಶಿಬಿರದ ಯಶಸ್ವಿಗೆ ಪೂರಕವಾಗುತ್ತದೆ. ಕಾಲೇಜಿನವರೆಗೆ ನಡೆಯುವ ೭ ದಿನಗಳ ಶಿಬಿರವು ಸಾಂದ್ರ ಸೇವಾ ಚಟುವಟಿಕೆಯಾಗಿದ್ದು ರಾಷ್ಟ್ರೀಯ ಸೇವಾ ಯೋಜನೆಯ ಆದರ್ಶಗಳ ಅನುಷ್ಠಾನಕ್ಕೆ ಸೂಕ್ತ ವೇದಿಕೆಯಾಗುತ್ತದೆ.

ಪ್ರಸ್ತೂತ ಯೋಜನೆಯ ಅನುಷ್ಠಾನವು ಕೆಲವು ಕೊರತೆಗಳಿಂದ ಕೊರಗುತ್ತಿರುವಂತಿದೆ. ಇದರಲ್ಲಿ ಮುಖ್ಯವಾಗಿ ಸಮಿಸ್ಟರ್ ಪದ್ಧತಿ, ಶೈಕ್ಷಣಿಕ ವೇಳಾಪಟ್ಟಿ ಬದಲಾಗುತ್ತಿರುವ ಯುವಕರ ಮನೋಭಾವ ಶೈಕ್ಷಣಿಕ ಸಂಸ್ಥೆಯಲ್ಲಿ ಆಡಳಿತ ವ್ಯವಸ್ಥೆಯ ಅನಾದಾರಣೆ, ವಿಶ್ವವಿದ್ಯಾಲಯ ಪ್ರೋತ್ಸಾಹದ ಕೊರತೆ, ಚಟುವಟಿಕೆಗಳಿಗೆ ಸಕಾಲದಲ್ಲಿ ಹಣಕಾಸು ಬಿಡುಗಡೆಯಾಗದಿರುವುದು, ಅಧಿಕಾರಿಗಳಿಗೆ ಸಮರ್ಪಕ ತರಬೇತಿ ಇಲ್ಲದಿರುವುದು ಎನ್.ಎಸ್.ಎಸ್. ಅಧಿಕಾರಿಗಳಲ್ಲಿ ಬದ್ಧತೆ ಮತ್ತು ಆಸಕ್ತಿಯ ಕೊರತೆ ಮೊದಲಾದವುಗಳು ಕಾರಣವಾಗಿವೆ. ಎನ್.ಎಸ್.ಎಸ್. ಅಧಿಕಾರಿ ಅರ್ಪಣಾ

ಮನೋಭಾವದಿಂದ ಈ ಯೋಜನೆಯಲ್ಲಿ ತೊಡಗಿಸಿಕೊಂಡರೆ ಇದು ಬಹುಪಾಲು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ. ಕಾರ್ಯಕ್ರಮ ಅಧಿಕಾರಿಗಳಿಗೆ ಪ್ರಾಚಾರ್ಯರು ಸಹೋದ್ಯೋಗಿಗಳು, ಆಡಳಿತ ಮಂಡಳಿ, ಸ್ಥಳೀಯ ಅಧಿಕಾರಿಗಳು, ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಇವರುಗಳ ಸಹಕಾರ ಅವಶ್ಯಕವಾದರೂ ಅವುಗಳನ್ನು ಹೇಗೆ ಹಾಗೂ ಎಷ್ಟು ಪ್ರಮಾಣದಲ್ಲಿ ಪಡೆಯಬೇಕೆಂಬುದು ಬಹುಪಾಲು ಎನ್.ಎಸ್.ಎಸ್. ಅಧಿಕಾರಿಯ ಕಾರ್ಯಸಾಮರ್ಥ್ಯದಲ್ಲಿ ಅವಲಂಬಿಸಿರುತ್ತದೆ.

ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಪರಿಪೂರ್ಣವಾಗಿ ತೊಡಗಿಸಿಕೊಂಡು ಅದರ ಅಂಶಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ವಿದ್ಯಾರ್ಥಿಯೊಬ್ಬ ಉತ್ತಮ ವಿದ್ಯಾರ್ಥಿಯಾಗುತ್ತಾನೆ. ಹಾಗೆ ಅಧಿಕಾರಿ ಕೃಷಿಕ, ಶಿಕ್ಷಕ, ವೈದ್ಯ, ವಿಜ್ಞಾನಿ, ವಕೀಲ, ಇಂಜಿನಿಯರ್ ಮೊದಲಾದವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಖ್ಯಾತಿ ಪಡೆದು ಗುರುತಿಸಲ್ಪಟ್ಟಿರುವ ಹಾಗೂ ಗೌರವಿಸಲ್ಪಟ್ಟಿರುವ ಸಹಸ್ರಾರು ಪ್ರಸಂಗಗಳನ್ನು ನೋಡಬಹುದು. ಒಟ್ಟಾರೆ ಜವಾಬ್ದಾರಿಯುತ ಹಾಗೂ ಉತ್ತಮ ಪೌರ ಪ್ರಜ್ಞೆಯುಳ್ಳ ನಾಗರಿಕನಾಗಿ ಬಾಳಿ ಸಮಾಜದಲ್ಲಿ ಇತರರಿಗೆ ಮಾದರಿಯಾಗಬಲ್ಲ ಸುಸಂಸ್ಕೃತ ಪ್ರಜೆಯಾಗುತ್ತಾನೆ ಎಂಬುದು ನಿಸ್ಸಂದೇಹವಾಗಿ ಹೇಳಬಹುದು. ಇದು ಕೇವಲ ಯೋಜನೆಯಾಗಿ ಉಳಿಯದೆ ಒಂದು ಆಂದೋಲನವಾಗಬೇಕು. ಆಗ ಇದು ಹೆಚ್ಚು ಫಲಕಾರಿಯಾಗುತ್ತದೆ. ಸಂಕೀರ್ಣತೆ ಪಡೆಯುತ್ತಿರುವ ಸಮಾಜದ ಮುಂದಿನ ದಿನಗಳಲ್ಲಿ ಯುವಜನರನ್ನು ತಿದ್ದಿ ಅವರುಗಳಿಗೆ ಬದುಕಿನ ಬಗ್ಗೆ ಸರಿಯಾದ ಕಲ್ಪನೆ ಮೂಡಿಸದಿದ್ದರೆ ನಮಗೆಲ್ಲಾ ಆಗುವ ತೊಂದರೆಗಳ ಬಗ್ಗೆ ರಾಷ್ಟ್ರಕವಿ ಕುವೆಂಪು ಹೀಗೆ ಎಚ್ಚರಿಸಿದ್ದಾರೆ.

"ಇನ್ನುಮುಂದಾದರೂ ನಾವು ವೈಜ್ಞಾನಿಕ ದೃಷ್ಟಿಯ ಮತ್ತು ವೈಚಾರಿಕ ಬುದ್ಧಿಯ ನೆರವಿನಿಂದ ನಮ್ಮ ನಾಡಿನ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ರಂಗಗಳನ್ನು ಪರಿಶೋಧಿಸದಿದ್ದರೆ ನಮಗೆ ಕೇಡು ತಪ್ಪದು".

ಹೃದಯದಲ್ಲಿ ಋಜುತ್ವ ತುಂಬಿದರೆ ತನ್ಮೂಲಕ ವಿಶ್ವಶಾಂತಿ ನೆಲೆಸುತ್ತದೆ ಎಂಬುದನ್ನು ಈ ಯೋಜನೆಯಷ್ಟು ಸುಸ್ಪಷ್ಟವಾಗಿ ತಿಳಿಸುವ ಮತ್ತೊಂದು ಸೂಕ್ತ ಮಾರ್ಗ ಕಾಣುವುದಿಲ್ಲ. ನಮ್ಮ ಶಿಕ್ಷಣ ಈ ದಾರಿಯಲ್ಲಿ ಕ್ರಮಿಸಿದರೆ ಮತ್ರ ಅರ್ಥಪೂರ್ಣವಾಗಿರುತ್ತದೆ ಎಂಬುದನ್ನು ಸ್ವಾಮಿ ಜಗದಾತ್ಮನಂದರ ಕೆಳಕಂಡ ವಾಕ್ಯಗಳಲ್ಲಿ ಸ್ಪಷ್ಟವಾಗಿ ತಿಳಿಯಬಹುದು.

"ವೈಯಕ್ತಿಕ ಮತ್ತು ಸಾಮಾಜಿಕ ಶುಚಿತ್ವದ ಅಭ್ಯಾಸಗಳು, ವಿಧೇಯತೆ, ಕ್ರಮಬದ್ಧತೆ, ಸಮಯ ಪ್ರಜ್ಞೆ ಪರಸ್ಪರ ಸಹಕಾರಭಾವದಿಂದ ಒಂದು ಕೆಲಸದ್ಲಿ ಭಾಗಿಯಾಗುವುದು, ಗುರು-ಹಿರಿಯರಲ್ಲಿ ಗೌರವ, ಅನುಕಂಪೆಯ ಮನೋಭಾವ, ನಡುವಳಿಕೆಯಲ್ಲಿ ವಿನಯ ಅತಿಥಿ ಅಭ್ಯಾಗತರವನ್ನು ಸತ್ಕರಿಸುವ ವಿಧಾನ, ಒಳ್ಳೆಯದನ್ನು ಕಂಡು ಮುಕ್ತ ಕಂಟದಿಂದ ಪ್ರಶಂಸಿಸುವುದು ಈ ಎಲ್ಲಾ ಗುಣಗಳನ್ನು

ಅರ್ಜಿಸಲು ಯೋಗ್ಯ ಮಾರ್ಗದರ್ಶಕರ ಮಾರ್ಗದರ್ಶನದಲ್ಲಿ ತರಬೇತಿ ಅಗತ್ಯ ವ್ಯಕ್ತಿಯಾಗಿ ತಾನು ಸುಖಿಯಾಗುವುದಕ್ಕೂ, ಸಾಮಾಜಿಕವಾಗಿ ಸಮಾಜಕ್ಕೆ ಸುಖವಾಗುವಂತೆ ನಡೆದುಕೊಳ್ಳುವುದಕ್ಕೂ ಅವಶ್ಯವೆನಿಸುವ ಸಂಸ್ಕಾರಗಳ ನಿರ್ಮಾಣವಾಗದಿದ್ದರೆ ಶಿಕ್ಷಣ ಅಪೂರ್ಣಮಾತ್ರವಲ್ಲ, ಅಪಾಯಕಾರಿಯೂ ಹೌದು"

ಈ ದಿವ್ಯ ವಾಣಿಯು ನಮ್ಮ ರಾಷ್ಟ್ರೀಯ ಸೇವಾ ಯೋಜನೆಯ ಸಾರಸಂಗ್ರಹರೂಪವಾಗಿದೆ. ಇದೇ ಸಮಾಜ ಕ್ರಮಿಸಬೇಕಾದ ದಾರಿಯೇ ಇದು. ಇದೇ ರಾಷ್ಟ್ರೀಯ ಸೇವಾ ಯೋಜನೆಯ ಗುರಿ. ಕೇವಲ ಸಾಂಪ್ರದಾಯಿಕ ಶಿಕ್ಷಣ ಒಂದರಿಂದಲೇ ಈ ಸಾಮಾಜದಲ್ಲಿರುವ ಎಲ್ಲಾ ಸವಾಲುಗಳನ್ನು ಸಮರ್ಪಕವಾಗಿ ಎದುರಿಸಲು ಸಾಧ್ಯವಿಲ್ಲ ಎಂಬ ಅರಿವು ಶಿಕ್ಷಣದ ಬಗ್ಗೆ ಆಸಕ್ತಿ ಇರುವವರಿಗೆ ತಿಳಿದಿದೆ. ಸಮಾಜದ ನೇರ ಸಮರ್ಪಕವನ್ನು ಪಡೆದಾಗ ಮಾತ್ರ ಸಮಾಜದ ನೋವು ನಲಿವುಗಳಿಗೆ ಸ್ಪಂಧಿಸುವ ಜೀವನದ ಮೌಲ್ಯಗಳನ್ನು ಎತ್ತಿ ಹಿಡಿಯುವ ಪ್ರವೃತ್ತಿ ಹುಟ್ಟುತ್ತದೆ. ಈ ದಿಸೆಯಲ್ಲಿ ಶಿಕ್ಷಣ ಕ್ಷೇತ್ರದ ಹಲವು ಸಮಸ್ಯೆಗಳಿಗೆ ಈ ಯೋಜನೆಯು ಉತ್ತರ ನೀಡಬಲ್ಲದು. ಹಾಗೆ ಸಮಾಜದ ಬೇರೆ ಬೇರೆ ಸಮಸ್ಯೆಗಳಿಗೆ ಈ ಯೋಜನೆಯ ಮೂಲಕ ಪರಿಹಾರವನ್ನು ಕಾಣಬಹುದು.

ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಶಿಸ್ತು, ಸಮ್ಯಮ, ಉತ್ತಮ ನಾಯಕತ್ವ, ವ್ಯಕ್ತಿಗೌರವ, ಕಾಯಕದ ಬಗ್ಗೆ ಗೌರವ, ಸಹಬಾಳ್ವೆ, ಭ್ರಾತೃತ್ವ, ಜಾತ್ಯಾತೀತೆ, ಭಾವೈಕ್ಯತೆ ಹಾಗೂ ಜವಾಬ್ದಾರಿಯುತ ವ್ಯಕ್ತಿತ್ವ ಇತ್ಯಾದಿ ಉತ್ತಮ ದಯೆ ಹಾಗೂ ಗುಣಗಳನ್ನು ಬೆಳೆಸಿಕೊಳ್ಳಲು ಇದು ಸಹಕಾರಿಯಾಗಿದೆ. ಅಲ್ಲದೆ ಇಲ್ಲಿ ಅನುಭವದ ಮೂಲಕ ಶಿಕ್ಷಣವನ್ನು ನೀಡಲಾಗುವುದು. ಇದರಲ್ಲಿ ವ್ಯಕ್ತಿ ಮತ್ತು ಸಮಷ್ಟಿಯ ವಿಕಸನ ಅಡಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಸೇವೆಯ ಮೂಲಕ ಶಿಕ್ಷಣ, ಶಿಕ್ಷಣದ ಮೂಲಕ ಸೇವೆಯನ್ನು ನೀಡುವ ಯೋಜನೆಯೇ ರಾಷ್ಟ್ರೀಯ ಸೇವಾ ಯೊಜನೆ.

ವಿದ್ಯಾರ್ಥಿಗಳು ಸೂಕ್ತ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ಅವರಲ್ಲಿ ಇರಬಹುದಾದ ಓರೆ-ಕೋರೆಗಳನ್ನು ತಿದ್ದಿಕೊಳ್ಳಲು ಇದು ಸಾಧನವಾಗುವುದು. ಕೆಲವೊಮ್ಮೆ ಶಿಕ್ಷಣ ಕ್ಷೇತ್ರದಲ್ಲಿ ಅಶಾಂತಿ, ಕ್ಷೋಭೆ ಇವುಗಳನ್ನು ಕಾಣುತ್ತೇವೆ. ಇವು ಬಹುತೇಕ ಅರಿವು ಮತ್ತು ಮಾರ್ಗದರ್ಶನದ ಕೊರತೆಯಿಂದಾಗಿ ಆಗುವ ದುಷ್ಪರಿಣಾಮಗಳು. ವಿದ್ಯಾರ್ಥಿಗಳು ಈ ಯೋಜನೆಯಲ್ಲಿ ಸಕ್ರೀಯವಾಗಿ ತೊಡಗಿದರೆ ಶಿಕ್ಷಣ ಕ್ಷೇತ್ರದಲ್ಲಿರುವ ಬಹಳಷ್ಟು ಸಮಸ್ಯೆಗಳು ಇಲ್ಲವಾಗುತ್ತವೆ. ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳು ಅದರಿಂದ ಹೊರಗಿರುವ ಸಾಮಾನ್ಯ ವಿದ್ಯಾರ್ಥಿಗಳಿಗಿಂತ ಭಿನ್ನವಾಗಿರುವುದನ್ನು ಈ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ನಾವು ಅಂತಹ ವಿದ್ಯಾರ್ಥಿಗಳನ್ನು ಕಾಣುತ್ತೇವೆ. ಹೀಗೆ ಈ ಯೋಜನೆ ಒಂದು ಉತ್ತಮ ಸಂಸ್ಕಾರ ನೀಡುತ್ತದೆ.

■■



ಬಹುತ್ವ ಮತ್ತು ಒಕ್ಕೂಟ ವ್ಯವಸ್ಥೆಯ ಪರಿಕಲ್ಪನೆಯನ್ನು ಇನ್ನೂ ವಿಸ್ತಾರವಾಗಿ ನೋಡುವ ಆಶಯವನ್ನು ಡಾ. ಪ್ರಕಾಶ ನರಗುಂದರು ಈ 'ಮುತ್ತಿನ ತೆನೆ'ಯ ಮೂಲಕ ಪ್ರಕಟಿಸಿದ್ದಾರೆ. ಇಲ್ಲಿನ ಎಲ್ಲಾ ಲೇಖನಗಳೂ ಸಮುದಾಯಕ್ಕೆ ಅಗತ್ಯವಿರುವ ಜ್ಞಾನ ವಿಸ್ತರಣೆಯ ದೂರದೃಷ್ಟಿತ್ವವನ್ನು ನಿರೂಪಿಸುತ್ತವೆ. ಜ್ಞಾನಾಂತಿಕ ಒಲವುಗಳ ಸಂಕಥನವೇ ಆಗಿದೆ ಈ 'ಮುತ್ತಿನ ತೆನೆ'. ಸಂಶೋಧನಾ ವಿದ್ಯಾರ್ಥಿಗಳ ಆಕರ ಗ್ರಂಥವಾಗಿಯೂ, ಸಂಸ್ಕೃತಿ ಚಿಂತಕರ ಜ್ಞಾನ ಸೆಲೆಯಾಗಿಯೂ ಈ ಸಂಪಾದನೆ ಮೂಡಿ ಬಂದಿದೆ. ಡಾ.ಪ್ರಕಾಶ ನರಗುಂದ ಅವರ ಈ ಶ್ರಮ ಅಭಿನಂದನಾರ್ಹ.

– ಡಾ. ರಾಜಶೇಖರ ಚಂದ್ರಶೇಖರ ಕಂಬಾರ



ISBN 978 81 947130 3 6